# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002**

ಸಂಖ್ಯೆ: BBMP/Addl.Dir/JDNORTH/LP/0293/2014-15 ದಿನಾಂಕ: 12–04–2019

## ಪ್ರಾರಂಭಿಕ ಪ್ರಮಾಣಪತ್ರ

ವಿಷಯ: ಆಸ್ತಿ ಸಂಖ್ಯೆ 305/304, ಸರ್ವೆ ನಂ. 140, 123, ಭೋಗನಹಳ್ಳಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ವಾರ್ಡ್ ನಂ. 150, ಮಹದೇವಪುರ ವಲಯ, ಬೆಂಗಳೂರು, ಇಲ್ಲಿ ನಿರ್ಮಿಸುತ್ತಿರುವ ಬಿಲ್ಡಿಂಗ್ – 2 (ಬ್ಲಾಕ್ – ಬಿ) ರಲ್ಲಿ ವಿಂಗ್ – ಐ, ಜೆ, ಕೆ, ಎಲ್ ಮತ್ತು ಎಂ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD NORTH/0293/2014-15, ದಿನಾಂಕ: 09–10–2015
2) ತಮ್ಮ ಮನವಿ ಪತ್ರ ದಿನಾಂಕ: 21–03–2019

* * * * * * *

ಆಸ್ತಿ ಸಂಖ್ಯೆ: 305/304, ಸರ್ವೆ ನಂ. 140, 123, ಭೋಗನಹಳ್ಳಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ವಾರ್ಡ್ ನಂ. 150, ಮಹದೇವಪುರ ವಲಯ, ಬೆಂಗಳೂರು, ಇಲ್ಲಿ ಬಿಲ್ಡಿಂಗ್ – 1 (ಬ್ಲಾಕ್ – ಎ) ರಲ್ಲಿ ವಿಂಗ್ – ಎ, ಬಿ, ಸಿ, ಡಿ, ಇ, ಎಫ್, ಜಿ ಮತ್ತು ಹೆಚ್ ರಲ್ಲಿ 2ತಳ + ನೆಲ + ಮೇಲಿನ 14 ಅಂತಸ್ತುಗಳು ಮತ್ತು ಬಿಲ್ಡಿಂಗ್– 2 (ಬ್ಲಾಕ್ – ಬಿ) ರಲ್ಲಿ ವಿಂಗ್ – ಐ, ಜೆ, ಕೆ, ಎಲ್ ಮತ್ತು ಎಂ ರಲ್ಲಿ 2 ತಳ + ನೆಲ + ಮೇಲಿನ 14 ಅಂತಸ್ತುಗಳಲ್ಲಿ 49 EWS ಘಟಕಗಳನ್ನೊಳಗೊಂಡಂತೆ ಒಟ್ಟಾರೆ 488 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡ ನಿರ್ಮಿಸಲು ಉಲ್ಲೇಖ (1) ರಂತೆ ಈ ಕಛೇರಿಯಿಂದ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಬಿಲ್ಡಿಂಗ್ –1 (ಬ್ಲಾಕ್ – ಎ) ರಲ್ಲಿ ವಿಂಗ್ – ಎ, ಬಿ, ಸಿ ಮತ್ತು ಡಿ ರಲ್ಲಿ 2 ತಳ + ನೆಲ + ಮೇಲಿನ 14 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡಕ್ಕೆ ದಿನಾಂಕ: 27–07–2016 ರಂದು ಮತ್ತು ಬಿಲ್ಡಿಂಗ್ –1 (ಬ್ಲಾಕ್ – ಎ) ರಲ್ಲಿನ ವಿಂಗ್ – ಇ, ಎಫ್, ಜಿ ಮತ್ತು ಹೆಚ್ ರಲ್ಲಿನ 2 ತಳ + ನೆಲ + ಮೇಲಿನ 14 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡಕ್ಕೆ ದಿನಾಂಕ: 06–04–2017 ರಂದು ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ) ವನ್ನು ನೀಡಲಾಗಿರುತ್ತದೆ. ಪ್ರಸ್ತುತ ಬಿಲ್ಡಿಂಗ್ – 2 (ಬ್ಲಾಕ್ – ಬಿ) ರಲ್ಲಿ ವಿಂಗ್ – ಐ, ಜೆ, ಕೆ, ಎಲ್ ಮತ್ತು ಎಂ ಸದರಿ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ, ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯನ್ವಯ ಕಟ್ಟಡ ನಿರ್ಮಿಸುತ್ತಿರುವುದನ್ನು ಪರಿವೀಕ್ಷಿಸಲಾಗಿದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 02–04–2019 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಸಂಬಂಧ ಶುಲ್ಕದೊಂದಿಗೆ ದಂಡ ಶುಲ್ಕ ಸೇರಿ ಒಟ್ಟು ರೂ. 4,61,000/– (ರೂ. ನಾಲ್ಕು ಲಕ್ಷದ ಅರವತ್ತೊಂದು ಸಾವಿರ ಮಾತ್ರ) ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms 331-TP/000015 ದಿನಾಂಕ: 10–04–2019 ರಂದು ಸಂದಾಯ ಮಾಡಿರುವುದರಿಂದ, ಸದರಿ ಬಿಲ್ಡಿಂಗ್ – 2 (ಬ್ಲಾಕ್ – ಬಿ) ರಲ್ಲಿ ವಿಂಗ್ – ಐ, ಜೆ, ಕೆ, ಎಲ್ ಮತ್ತು ಎಂ ವಸತಿ ಸಮುಚ್ಚಯ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

**ಷರತ್ತುಗಳು**

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಯಾವುದೇ ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

3. ನಕ್ಷೆ ಮಂಜೂರಾತಿಯ ಸಿಂಧುತ್ವವು ಉಲ್ಲೇಖ (1) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

4. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ–ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

5. ನಿವೇಶನದ ಖಾತಾ ವಿಭಜನೆ, ದಾಖಲಾತಿಗಳನ್ನು / ಸ್ವತ್ತಿನ ಹಕ್ಕನ್ನು ಬದಲಾಯಿಸಿದಲ್ಲಿ ಮತ್ತು ಯಾವುದೇ ರೀತಿ ದಾಖಲಾತಿಗಳನ್ನು ಅಥವಾ ವಾಸ್ತವಾಂಶ ಮರೆಮಾಚಿದಲ್ಲಿ ಅರ್ಜಿದಾರರು ನೇರ ಹೊಣೆಯಾಗಿರುತ್ತಾರೆ ಮತ್ತು ನೀಡಲಾದ ಕಟ್ಟಡ ನಕ್ಷೆ ಮಂಜೂರಾತಿಯು ತನ್ನಿಂದತಾನೇ ರದ್ದುಗೊಳ್ಳುತ್ತದೆ.

6. ವಿವಿಧ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು

ಸಹಿ /–

**ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಗೆ,

ಮೆ: ರೋಹನ್ ಪ್ರಾಕನ್ ಎಲ್ಎಲ್‌ಪಿ ನ ಪರವಾಗಿ
ಶ್ರೀ ಸಂಜಯ್ ಕುಶಾಲ್‌ಚಂದ್ ಲುಕಂದ್‌ರವರು
# 1147, 3ನೇ ಮಹಡಿ, ಕೆ.ಪಿ.ಐಕಾನ್ ಬಿಲ್ಡಿಂಗ್,
12ನೆ ಮುಖ್ಯರಸ್ತೆ, ಹೆಚ್.ಎ.ಎಲ್. 2ನೇ ಸ್ಟೇಜ್,
ಇಂದಿರಾನಗರ, ಬೆಂಗಳೂರು – 560 008.

**ಪ್ರತಿಯನ್ನು:**

1. ಕಾರ್ಯಪಾಲಕ ಅಭಿಯಂತರರು (ಮಹದೇವಪುರ ವಿಭಾಗ) / ಸಹಾಯಕ ಕಾರ್ಯಪಾಲಕ ಅಭಿಯಂತರರು (ಮಾರತ್‌ಹಳ್ಳಿ ಉಪ–ವಿಭಾಗ) ರವರಿಗೆ ಮಾಹಿತಿಗಾಗಿ.
2. ಕಛೇರಿ ಪ್ರತಿ.

B. R. Mudda B 12/4/19

**ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

12/04 12/4 12/4/19